ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – ೩ **Part – III**	ಬೆಂಗಳೂರು, **ಸೋಮವಾರ, ೦೯, ಮಾರ್ಚ್, ೨೦೨೬**(ಫಾಲ್ಗುಣ, ೧೮, ಶಕವರ್ಷ, ೧೯೪೭) **BENGALURU, MONDAY, 09, MARCH, 2026 (PHALGUNA**, 18, SHAKAVARSHA, 1947)	ನಂ. ೧೯೯ **No. 199**

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 133 ಬಿಎಂಆರ್ 2026 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
4ನೇ ಮಹಡಿ ವಿಕಾಸ ಸೌಧ,
ಡಾ|| ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:09.03.2026.

ಅಧಿಸೂಚನೆ

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಷ್ಠಾನಗೊಳಿಸುತ್ತಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಗಾಗಿ ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 17(1) ರಡಿ ಉದ್ದೇಶಿತ ಸಮಗ್ರ ಉಪನಗರ ಯೋಜನೆಗಾಗಿ ಭೂಸ್ವಾಧೀನಕ್ಕಾಗಿ ಪ್ರಾಥಮಿಕ ಅಧಿಸೂಚನೆಯನ್ನು ದಿನಾಂಕ:12.03.2025 ರಂದು ಪ್ರಕಟಿಸಲಾಗಿದ್ದು, ಪ್ರಸ್ತುತ ಯೋಜನೆಯು ದೊಡ್ಡ ವಿಸ್ತೀರ್ಣದ ಯೋಜನೆಯಾಗಿದ್ದು 10450 ಹಿಸ್ಸಾ ನಂಬರ್‌ಗಳನ್ನು ಒಳಗೊಂಡಿರುವುದರಿಂದ ಮತ್ತು ಜೆ.ಎಂ.ಸಿ ಕಾರ್ಯದಲ್ಲಿ ತೊಡಕುಗಳ ಕಾರಣದಿಂದ ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸಲಾಗದಿರುವುದನ್ನು ಪರಿಗಣಿಸಿ, ಭೂಸ್ವಾಧೀನ ಪಾರದರ್ಶಕತೆ, ನ್ಯಾಯೋಚಿತ ಪರಿಹಾರ, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ 2013ರ ಕಲಂ 19(7) ರನ್ವಯ ಈ ಕೆಳಕಂಡ ಕೋಷ್ಟಕದಲ್ಲಿನ 09 ಭೂಸ್ವಾಧೀನಕ್ಕೆ ಸಂಬಂಧಿಸಿದ ಪ್ರಾಥಮಿಕ ಅಧಿಸೂಚನೆಗಳ ತರುವಾಯ ಅಂತಿಮ ಅಧಿಸೂಚನೆ ಹೊರಡಿಸಲು ಹೆಚ್ಚುವರಿಯಾಗಿ ದಿನಾಂಕ:12.03.2026 ರಿಂದ 11.03.2027 ರವರೆಗೆ ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕ್ರ ಸಂ	ಗ್ರಾಮ	ಪ್ರಾಥಮಿಕ ಅಧಿಸೂಚನೆ ಸಂಖ್ಯೆ	ಪ್ರಾಥಮಿಕ ಅಧಿಸೂಚನೆ ದಿನಾಂಕ	ವಿಶೇಷ ರಾಜ್ಯಪತ್ರ ಸಂಖ್ಯೆ
1	ಬೈರಮಂಗಲ	ಜಿ.ಬಿ.ಡಿ.ಎ/ವಿಭೂ-1/01/2024-25	12.03.2025	148
2	ಬನ್ನಿಗಿರಿ	ಜಿ.ಬಿ.ಡಿ.ಎ/ವಿಭೂ-1/02/2024-25	12.03.2025	141
3	ಹೊಸೂರು	ಜಿ.ಬಿ.ಡಿ.ಎ/ವಿಭೂ-1/03/2024-25	12.03.2025	149
4	ವಡೇರಹಳ್ಳಿ	ಜಿ.ಬಿ.ಡಿ.ಎ/ವಿಭೂ-1/04/2024-25	12.03.2025	147
5	ಕಂಚುಗಾರನಹಳ್ಳಿ	ಜಿ.ಬಿ.ಡಿ.ಎ/ವಿಭೂ-2/01/2024-25	12.03.2025	144
6	ಕೆಂಪಯ್ಯನಪಾಳ್ಯ	ಜಿ.ಬಿ.ಡಿ.ಎ/ವಿಭೂ-2/02/2024-25	12.03.2025	142
7	ಕೆ.ಜಿ.ಗೊಲ್ಲರಪಾಳ್ಯ	ಜಿ.ಬಿ.ಡಿ.ಎ/ವಿಭೂ-2/03/2024-25	12.03.2025	143
8	ಮಂಡಲಹಳ್ಳಿ	ಜಿ.ಬಿ.ಡಿ.ಎ/ವಿಭೂ-2/04/2024-25	12.03.2025	146
9	ಅರಳಾಳುಸಂದ್ರ	ಜಿ.ಬಿ.ಡಿ.ಎ/ವಿಭೂ-2/05/2024-25	12.03.2025	145

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಾಜೇಶ್ ಎಸ್ ಸೂಳಿಕೇರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
(ಬಿ.ಡಿ.ಎ & ಬೆಂ-1).

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH